

## ಭೂತಾಪ-ಸಂತಾಪ

ಭಾರತದಲ್ಲಿ ನಾವು ಬೇಸಿಗೆಯ ತಾಪದಿಂದ ಸಾವಿರಾರು ಜನರು ಸಾಯುವ ವಿಷಯವನ್ನು ಪ್ರತಿವರ್ಷ ಪತ್ರಿಕೆಯಲ್ಲಿ ಓದುತ್ತೇವೆ. ಆದರೆ ಯೂರೋಪಿನಲ್ಲಿಯೂ ಇಂಥದೇ ಪರಿಸ್ಥಿತಿ ಉಂಟಾಗಿರುವುದು ನಮಗೆ ಸೋಜಿಗವೆನಿಸುತ್ತದೆ. ಫ್ರಾನ್ಸ್‌ನ ಪ್ರಸಿದ್ಧ ನಗರಗಳಲ್ಲಿ ಯಾವುದೇ ಅಂಗಡಿ ಮಳಿಗೆಯಲ್ಲೂ ಫ್ಯಾನ್, ಏರ್‌ಕಂಡೀಷನರ್‌ಗಳು ಲಭ್ಯವಿಲ್ಲ ಎಂದರೆ ಅಚ್ಚರಿಯೇ? ಅಷ್ಟೇಕೆ, ಇಂಟರ್‌ನೆಟ್‌ನ ಮೂಲಕವೂ ದೊರೆಯುತ್ತಿಲ್ಲವಂತೆ! ಇದೆಂಥ ಬರಗಾಲ ಎಂದು ಉದ್ಗರಿಸಿದರೆ, ಯೂರೋಪಿನಾದ್ಯಂತ ಈಗ ಒಣಹವೆ ಬೀಸುತ್ತಿದ್ದು ೪೫ ವರ್ಷಗಳಿಂದ ಕಂಡರಿಯದ ತಾಪದಿಂದ ಜನಜೀವನ ಅಸ್ತವ್ಯಸ್ತವಾಗಿದೆ. ಜನ ಬಿಸಿಲಿನ ಬೇಗೆಯನ್ನು ತಡೆಯಲಾರದೆ ಕಂಗೆಟ್ಟಿದ್ದರೆ, ಕಾಡ್ಗಿಚ್ಚಿನಿಂದ ಸುಮಾರು ೪,೩೭,೫೦೦ ಎಕರೆಯಷ್ಟು ಕಾಡು ಪ್ರದೇಶ ಬೆಂಕಿ ಕಾರುತ್ತಿದೆ. ಹೊಗೆ, ಬೂದಿ ಹಾಗೂ ನಗರಗಳ ವಾಯುಮಾಲಿನ್ಯವೂ ಸೇರಿದಂತೆ ಪರಿಸ್ಥಿತಿ ಉಸಿರುಕಟ್ಟುವಂತಾಗಿದ್ದು ಮಕ್ಕಳ ಮತ್ತು ವೃದ್ಧರ ಆರೋಗ್ಯ ಕೆಡುತ್ತಿದೆ. ಜನ ೪೦ ಡಿಗ್ರಿ ಸೆಲ್ಸಿಯಸ್‌ನ ತಾಪವನ್ನು ತಾಳಲಾರದೆ ಸಮುದ್ರದಡದಲ್ಲಿರುವ, ಪರ್ವತಗಳಲ್ಲಿರುವ ವಿಹಾರಗಳಿಗೆ ನುಗ್ಗುತ್ತಿದ್ದಾರೆ. ಆದರೆ ಐಸ್ ಕ್ರೀಮ್ ಮಾರುವವರಿಗೆ ಸುಗ್ಗಿಯ ಕಾಲ. ಜೀವನದಲ್ಲೇ ಇಷ್ಟೊಂದು ಐಸ್‌ಕ್ರೀಮನ್ನು ನಾನು ಮಾರಿಲ್ಲ ಎಂದು ಅತ್ಯಂತ ಪ್ರಸಿದ್ಧ ಕಾರ್ಖಾನೆಯ ನೌಕರ ಸಂತಸಪಟ್ಟನಂತೆ. ಈ ಪರಿಸ್ಥಿತಿಯಿಂದ ಕಳೆದ ಆಗಸ್ಟ್‌ನಲ್ಲಿ 10,000ಕ್ಕೂ ಅಧಿಕ ಮಂದಿ ಉಷ್ಣ ಸಂಬಂಧೀ ಕಾಯಿಲೆಗಳಿಂದ ಅಸು ನೀಗಿದ್ದಾರೆ.

ಭೂಮಿಯ ಉಷ್ಣಾಂಶ ಹೆಚ್ಚುತ್ತಿದೆಯೆ? ಮಾನವನ ದುರಾಸೆಯಿಂದ ಭೂಮಿಯ ಶೋಷಣೆಯಾಗುತ್ತಿರುವುದರಿಂದ ಭೂತಾಯಿಗೆ ಕೋಪ ಬಂದು ಆ ಕೋಪತಾಪದಿಂದ ಭೂಮಿ ಬಿಸಿಯಾಗುತ್ತಿರಬಹುದೆ? ವಾಣಿಜ್ಯಯುಗದ ಸ್ಪರ್ಧಾತ್ಮಕ ಜೀವನಕ್ರಮದಲ್ಲಿ ಹೃದಯ ತಣ್ಣಗಾಗುವುದು, ಅಂದರೆ ಪ್ರೀತಿಯ ಕೊರತೆಯುಂಟಾಗುವುದು ಸಹಜ. ಇದರಿಂದಾಗಿ ಅಂತರ-ಮಾನವ ಸಂಬಂಧವೂ ತಣ್ಣಗಾಗುವುದು (cold relationship). ಹೀಗೆ ಮಾನವ ಈಗ 'ಶೀತ' ಮತ್ತು 'ಉಷ್ಣ' ಎರಡೂ ಕಾಯಿಲೆಗಳಿಂದ ನರಳುತ್ತಿದ್ದಾನೆ. ನಮಗೆ ಬೆಚ್ಚನೆಯ ಹೃದಯ ಮತ್ತು ತಣ್ಣನೆಯ ಮೆದುಳು ಬೇಕಾಗಿದೆ. ಹಾಗಾದಾಗ ಲೋಭ ಕಡಮೆಯಾಗುತ್ತದೆ, ಅಂತರ-ಮಾನವ ಸಂಬಂಧ ಉತ್ತಮವಾಗುತ್ತದೆ ಮತ್ತು ಆಂತರಿಕ ನೆಮ್ಮದಿ ವೃದ್ಧಿಯಾಗುತ್ತದೆ, ಹಾಗೂ ಒಟ್ಟು ಭೂಮಿ ವಾಸಯೋಗ್ಯವಾಗುತ್ತದೆ. ಈಗ ನಾವು ಭೂಮಿಯನ್ನು ವಾಸಕ್ಕೆ ಅಯೋಗ್ಯವನ್ನಾಗಿ ಮಾಡಿಕೊಳ್ಳುತ್ತಿದ್ದೇವೆ. ಲಕ್ಷಾಂತರ ವರ್ಷಗಳ ವಿಕಾಸದ ಪರಿಣಾಮವಾಗಿ ಮಾನವನು ಜನಿಸಿದನು. ಅವನ ಜನನವೇ ತನಗೆ ಮೃತ್ಯು ಎಂದು ಪ್ರಕೃತಿ ಭಾವಿಸಿದ್ದಳೆ? ಇದ್ದರೂ ಇರಬಹುದು. ಇದೇ ವಿಕಾಸದ ನಿಯಮವಾಗಿರಬಹುದು. ಒಟ್ಟಿನಲ್ಲಿ ನಮ್ಮ ಮನೆಗೆ ನಾವೇ ಬೆಂಕಿಯಿಟ್ಟುಕೊಳ್ಳುತ್ತಿದ್ದೇವೆ. ಮಾನವನ ಸರ್ವನಾಶದಿಂದ ಇನ್ನೂ ಉತ್ತಮ ಸೃಷ್ಟಿ ಮುಂದೆ ಬರಬಹುದೆ? ❖

## ಸಂಸ್ಕಾರಗಳ ಸಂಸ್ಕರಣ

**ನ**ಮ್ಮ ಜೀವನ, ನಡೆ, ನುಡಿಗಳೆಲ್ಲವೂ ಜೀನು(genes)ಗಳ ಪರಿಣಾಮವೇ? ಅಥವಾ ವಾತಾವರಣದ ಪರಿಣಾಮವೇ? "ಮಾನವನ ಚಿಂತನೆ ಅವನದಲ್ಲ, ಅದು ಅವನು ಯಾವ ಸಾಮಾಜಿಕ ವರ್ಗದ ಭಾಗವಾಗಿರುವನೊ ಅದರ ಪ್ರತಿಫಲ" ಎನ್ನುತ್ತಾರೆ ಶ್ರೇಷ್ಠ ಚಿಂತಕ ವಿಲ್ ಡ್ಯುರಾಂಟ್. ಮಾನವನು ಈಗ ಏನಾಗಿರುವನೊ ಅದು ಅವನ ಸಂಸ್ಕಾರಗಳ ಪರಿಣಾಮ ಎನ್ನುತ್ತಾರೆ ಕರ್ಮಸಿದ್ಧಾಂತಿಗಳು. ನಮ್ಮ ದೇಹಲಕ್ಷಣಗಳನ್ನು ಮಾತ್ರವಲ್ಲದೆ, ನಮ್ಮ ಶೀಲವನ್ನು ನಿರ್ಧರಿಸುವುದೂ ಈ ಜೀನುಗಳೇ ಎನ್ನುತ್ತಾರೆ ಜೆನೆಟಿಕ್ ವಿಜ್ಞಾನಿಗಳು. ಆದರೆ ಈಗ ವಿಜ್ಞಾನಿಗಳ ಚಿಂತನೆಯಲ್ಲಿ ಬದಲಾವಣೆ ಉಂಟಾಗುತ್ತಿದೆ— ಇದಕ್ಕೆ ಜೀನುಗಳು ಕಾರಣವೊ ಅಥವಾ ವಾತಾವರಣವೊ ತಿಳಿಯದು! ಇತ್ತೀಚೆಗೆ ನಡೆದ ಜೀನ್‌ಗಳ ಅಧ್ಯಯನದ ಪರಿಣಾಮವಾಗಿ ಜೀನುಗಳೇ ಎಲ್ಲವನ್ನೂ ವಿವರಿಸಲಾರವು ಎಂಬ ತೀರ್ಮಾನಕ್ಕೆ ವಿಜ್ಞಾನಿಗಳು ಬಂದಿದ್ದಾರೆ. ಹಿಂದೆ ಭಾವಿಸಿದ್ದಂತೆ ಮಾನವನಲ್ಲಿ ೧೦೦,೦೦೦ ಜೀನುಗಳಿರದೆ ಕೇವಲ ೩೦,೦೦೦ ಜೀನುಗಳಿವೆಯಂತೆ. ಮುಂದಿನ ಸಂಶೋಧನೆ ಈ ಸಂಖ್ಯೆಯನ್ನು ಇನ್ನೂ ಹ್ರಸ್ವಗೊಳಿಸಬಹುದು!

ಅನುಭವಗಳು ಜೀನುಗಳ ಸ್ವಭಾವವನ್ನು ಬದಲಾಯಿಸಬಲ್ಲವು ಎಂದೂ ಈಗ ವಿಜ್ಞಾನಿಗಳು ಹೇಳುತ್ತಾರೆ. ಜೀನುಗಳು ಸೂತ್ರಧಾರನು ಗೊಂಬೆಯಾಡಿಸುವಂತೆ ನಮ್ಮನ್ನು ಆಡಿಸುತ್ತಿಲ್ಲ, ಅವು ನಮ್ಮ ವರ್ತನೆಗಳ ಅಧೀನದಲ್ಲಿವೆ ಎಂದು ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ದೇಹವು ಒಂದು ಸಿದ್ಧವಸ್ತುವಲ್ಲ, ಅದು ಬೆಳೆಯುವಂತಹುದು, ಜಿನೋಮ್ ದೇಹವನ್ನು ಕಟ್ಟುವುದಕ್ಕೆ ನೀಲಿನಕ್ಷೆಯಲ್ಲ, ಅದು ದೇಹವೆಂಬ ಪದಾರ್ಥವನ್ನು ತಯಾರಿಸುವುದಕ್ಕಿರುವ ಒಂದು ಪಾಕ ಸೂತ್ರ. ಅದನ್ನು ಉಪಯೋಗಿಸಿಕೊಂಡು ಪ್ರತಿಯೊಬ್ಬನೂ ತನ್ನ ಅನುಭವಕ್ಕೆ ತಕ್ಕಂತೆ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬಹುದು. ಈ ಅನುಭವಗಳ ಆಧಾರದ ಮೇಲೆ ಜೀನುಗಳು ತಮ್ಮ ಪಾಕಸೂತ್ರವನ್ನೇ ಬದಲಾಯಿಸಬಹುದು.

ಒಟ್ಟಿನಲ್ಲಿ ಹಳೆಯ ಸಂಸ್ಕಾರಗಳೇ ಸರ್ವಸ್ವವಲ್ಲ, ಅವುಗಳನ್ನೂ ಸಂಸ್ಕಾರಗೊಳಿಸಬಹುದು. ಶಿಕ್ಷಣ, ಜೀವನಾನುಭವ, ವಾತಾವರಣ, ಇಚ್ಛಾಶಕ್ತಿ ಇತ್ಯಾದಿಗಳು ನಮ್ಮ ಜೀವನವನ್ನು ರೂಪಿಸುವಲ್ಲಿ ಮುಖ್ಯ ಪಾತ್ರ ವಹಿಸುತ್ತವೆ ಎಂಬುದು ನಿಶ್ಚಯ. ಆ ಹಿಂದಿನ ಸಂಸ್ಕಾರಗಳೂ ಹಿಂದಿನ ಕರ್ಮಫಲಗಳೇ ಆಗಿರುವುದರಿಂದ "ನಮ್ಮ ಭವಿಷ್ಯಕ್ಕೆ ನಾವೇ ಹೊಣೆ" ಎಂಬ ವಿವೇಕಾನಂದರ ಮಾತು ಸತ್ಯಸ್ಯಸತ್ಯವಾಗಿದೆ. ಹಿತೋಪದೇಶ ಹೇಳುತ್ತದೆ :

**ಪೂರ್ವಜನ್ಮಕೃತಂ ಕರ್ಮ ತದ್ ದೈವಮಿತಿ ಕಥ್ಯತೇ ।**
**ತಸ್ಮಾತ್ ಪುರುಷಕಾರೇಣ ಯತ್ನಂ ಕುರ್ಯಾದತಂದ್ರಿತಃ ॥**

**"ಪೂರ್ವಜನ್ಮದಲ್ಲಿ ಮಾಡಿದ ಕರ್ಮವನ್ನೇ ಅದೃಷ್ಟ ಎಂದು ಕರೆಯುವುದು. ಆದ್ದರಿಂದ ವ್ಯಕ್ತಿಯು ಪುರುಷಕಾರದಿಂದ ಸೋಮಾರಿತನಕ್ಕೆ ಅವಕಾಶಕೊಡದೆ, ಪ್ರಯತ್ನ ಮಾಡಬೇಕು."** ❖